ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**


33 [illegible]

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ - ಕೃಷಿ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 12/1/2021

# ಕೇಂದ್ರದ ಕೃಷಿ ಕಾಯ್ದೆಗೆ ಸುಪ್ರೀಂ ತಡೆ?

ವಿ.ವಾ. ೧೨-೧-೨೦೨೧



» ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಎಚ್ಚರಿಕೆ

**ನವದೆಹಲಿ:** ಕೃಷಿ ಕಾಯ್ದೆಗೆ ಸಂಬಂಧಿಸಿದಂತೆ ವಿವಿಧ ರೈತ ಸಂಘಟನೆಗಳ ಜತೆ ಕೇಂದ್ರ
ಸರ್ಕಾರ ನಡೆಸುತ್ತಿರುವ ಮಾತುಕತೆ ತೀವ್ರ ನಿರಾಸೆ ತಂದಿರುವುದಾಗಿ ಅಸಮಾಧಾನ
ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಕೂಡಲೇ ಈ ಕಾನೂನುಗಳಿಗೆ ತಡೆ ನೀಡದಿದ್ದಲ್ಲಿ
ನಾವೇ ಅದನ್ನು ತಡೆಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ದೆಹಲಿಯಲ್ಲಿ ಪರಿಸ್ಥಿತಿ
ಬಿಗಡಾಯಿಸಿದೆ. ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಪ್ರತಿಕೂಲ ಹವಾಮಾನ
ಪರಿಸ್ಥಿತಿಯಲ್ಲೂ ಮಹಿಳೆಯರು, ವೃದ್ಧರು ಪ್ರತಿಭಟನೆ ನಡೆಸಬೇಕೇ? ಎಂದು
ಪ್ರಶ್ನಿಸಿರುವ ನ್ಯಾಯಾಲಯ ತಜ್ಞರ ಸಮಿತಿ ರಚನೆಗೆ ಒಲವು ತೋರಿದೆ. ಮಂಗಳವಾರ
ಈ ಬಗ್ಗೆ ಆದೇಶ ನೀಡಲಿದೆ.

● ವಿವರ ಪುಟ 8


## ಇಂದು ಸುಪ್ರೀಂಕೋರ್ಟ್‌ನಿಂದ ಮಹತ್ವದ ಆದೇಶ | ಕೇಂದ್ರ ಸರ್ಕಾರದ ವಿರುದ್ಧ ಸಿಜೆಐ ಗರಂ

# ಮೂರು ಕೃಷಿ ಕಾಯ್ದೆಗಳಿಗೆ ತಾತ್ಕಾಲಿಕ ತಡೆ ಸಾಧ್ಯತೆ

12.1-2021

■ ವಿಜಯವಾಣಿ ಸುದ್ದಿಜಾಲ ನವದೆಹಲಿ

ಕೃಷಿ ಸುಧಾರಣಾ ಕಾನೂನುಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ರೈತರ ಮನವೊಲಿಸಲು ಕೇಂದ್ರ ಸರ್ಕಾರ ವಿಫಲವಾಗುತ್ತಿರುವುದು ಸುಪ್ರೀಂಕೋರ್ಟ್ ಕೆಂಗಣ್ಣಿಗೆ ಗುರಿಯಾಗಿದೆ. ಕೃಷಿ ಕಾನೂನುಗಳ ಬಗ್ಗೆ ಪರಿಶೀಲನೆಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿ ರಚನೆಗೆ ಸಿಜೆಐ ಎಸ್.ಎ. ಬೊಬ್ಡೆ ನೇತೃತ್ವದ ತ್ರಿಸದಸ್ಯ ಪೀಠ ಇಂಗಿತ ವ್ಯಕ್ತಪಡಿಸಿದ್ದು, ಅಲ್ಲಿಯವರೆಗೆ ಕಾನೂನಿನ ಜಾರಿಗೆ ಮಧ್ಯಂತರ ತಡೆ ನೀಡುವುದು ಸೂಕ್ತ ಎಂದು ಹೇಳಿದೆ.



ಹೊಸ ಕೃಷಿ ಕಾನೂನುಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಬಗ್ಗೆ ಸೋಮವಾರದ ವಿಚಾರಣೆ ಸಂದರ್ಭದಲ್ಲಿ ಯಾವುದೇ ಆದೇಶ ನೀಡದಿದ್ದರೂ, ಕಾನೂನಿಗೆ ತಾತ್ಕಾಲಿಕ ತಡೆ ನೀಡುವ ಕುರಿತ ವಿಚಾರಕ್ಕೆ ಸಂಬಂಧಿಸಿ ನ್ಯಾಯಪೀಠ ಮಂಗಳವಾರದಂದು ಆದೇಶ ಪ್ರಕಟಿಸಲಿದೆ. ಅದಕ್ಕೂ ಮುನ್ನ ಕೇಂದ್ರ ಸರ್ಕಾರ ಜಾರಿಗೆ ತಾತ್ಕಾಲಿಕ ತಡೆ ನೀಡಲು ಮುಂದಾಗುವುದೇ ಎಂಬುದು ಕುತೂಹಲ ಮೂಡಿಸಿದೆ.

ನೀವು ನಡೆಸುತ್ತಿರುವ ಸಂಧಾನ ಸಭೆಗಳು ಫಲಪ್ರದವಾಗುತ್ತಿಲ್ಲ. ಒಂದೂವರೆ ತಿಂಗಳಿಂದ ಪ್ರತಿಭಟನೆಗಳು ನಡೆಯುತ್ತಿವೆ. ಪರಿಸ್ಥಿತಿ ಹದಗೆಟ್ಟಿರುವುದನ್ನು ಕೋರ್ಟ್ ಗಮನಿಸಿದೆ. ಗಣರಾಜ್ಯೋತ್ಸವ ದಿನದಂದು ದೊಡ್ಡ ರ್‍ಯಾಲಿಗಳು ನಡೆದು, ಪರಿಸ್ಥಿತಿ ಕೈ ಮೀರಿದರೆ ಹೊಣೆ ಯಾರು ಎಂದು ಕೇಂದ್ರವನ್ನು ಕೋರ್ಟ್ ಪ್ರಶ್ನಿಸಿದೆ.

ಸಮಸ್ಯೆಗೆ ಸೌಹಾರ್ದಯುತ ಪರಿಹಾರ ಕಂಡುಹಿಡಿಯುವ. ಆ ಕಾರಣಕ್ಕಾಗಿಯೇ ಕೃಷಿ ಕಾನೂನುಗಳನ್ನು ತಡೆ ಹಿಡಿಯುವಂತೆ ಹೇಳುತ್ತಿದ್ದೇವೆ. ಸಂಧಾನಕ್ಕೆ ನಿಮಗೆ ಸಮಯಾವಕಾಶದ ಅಗತ್ಯವಿದೆ. ಕಾನೂನು ಜಾರಿಗೆ ತಡೆ ನೀಡುತ್ತೀರಿ ಎಂದಾದರೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತನ್ನು ಒಳಗೊಂಡ ಸಮಿತಿಯೊಂದನ್ನು ರಚಿಸುತ್ತೇವೆ. ಕಾನೂನು ಮುಂದುವರಿಸಲೇಬೇಕು ಎಂಬ ಹಠವೇಕೆ ನಿಮಗೆ ಎಂದು ಸಿಜೆಐ, ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್‌ರನ್ನು ಕೇಳಿದರು.

'ತೀವ್ರ ಚಳಿ, ಕರೊನಾ ಮಹಾಮಾರಿ ಮಧ್ಯೆ ರೈತರು ಪ್ರತಿಭಟಿಸುತ್ತಿದ್ದಾರೆ. ವೃದ್ಧರು ಹೆಣ್ಣುಮಕ್ಕಳೂ ಅಲ್ಲಿದ್ದಾರೆ. ರೈತರ ಆತ್ಮಹತ್ಯೆಗಳಾಗುತ್ತಿವೆ. ಅವರ ಆಹಾರ, ಆರೋಗ್ಯದ ಬಗ್ಗೆ ಯಾರು ಕಾಳಜಿ ವಹಿಸುತ್ತಿದ್ದಾರೆ? ಈ ಹೋರಾಟ ರಕ್ತಪಾತದಲ್ಲಿ ಅಂತ್ಯವಾದರೆ ಏನು ಮಾಡುವುದು' ಎಂದು ಸಿಜೆಐ ಆತಂಕ ಹೊರಹಾಕಿದರು.

ತಜ್ಞರ ಸಮಿತಿಯ ಮುಖ್ಯಸ್ಥರಾಗಬಲ್ಲ ಮಾಜಿ ಸಿಜೆಐಗಳ ಹೆಸರನ್ನು ಸೂಚಿಸುವಂತೆ ಕೇಂದ್ರ ಮತ್ತು ರೈತ ಸಂಘಗಳಿಗೆ ಸೂಚಿಸಿದೆ. ನಿವೃತ್ತ ಮುಖ್ಯ ನ್ಯಾಯಮೂರ್ತಿ ಆರ್.ಎಂ. ಲೋಧಾ ಹೆಸರು ವಿಚಾರಣೆ ವೇಳೆ ಕೇಳಿಬಂದಿದೆ.



ಸಾಂದರ್ಭಿಕ ಚಿತ್ರ

### ತಾತ್ಕಾಲಿಕ ತಡೆ ನೀಡಿದರೂ ಪ್ರತಿಭಟನೆ ನಿಲ್ಲಲ್ಲ

ಕೇಂದ್ರ ಸರ್ಕಾರ ಕಾನೂನು ರದ್ದುಗೊಳಿಸಬೇಕು ಎನ್ನುವುದು ರೈತ ಮುಖಂಡರ ಬೇಡಿಕೆ. ಅಲ್ಲದೆ ಸಮಿತಿ ರಚಿಸಿ ಕಾನೂನಿನ ಬಗ್ಗೆ ಚರ್ಚೆ ನಡೆಸುವುದು ರೈತರ ಆದ್ಯತೆಯ ವಿಷಯವಾಗಿಲ್ಲ. ಹೀಗಾಗಿ ಕಾನೂನು ಜಾರಿಗೆ ತಾತ್ಕಾಲಿಕ ತಡೆ ನೀಡುವುದು ರೈತರನ್ನು ಸಮಾಧಾನಪಡಿಸಿಲ್ಲ. ತಾತ್ಕಾಲಿಕ ತಡೆ ನೀಡಿದರೂ ನಮ್ಮ ಪ್ರತಿಭಟನೆ ಮುಂದುವರಿಯಲಿದೆ ಎಂದಿರುವ ರೈತರು, ಈ ಕಾನೂನು ಹಿಂಪಡೆಯದೆ ನಾವು ಸ್ಥಳ ಬಿಟ್ಟು ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ,

### ತಾಳ್ಮೆಯ ಪ್ರವಚನ ಬೇಡ

ಕೃಷಿ ಕಾನೂನುಗಳ ಬಗ್ಗೆ ರೈತರೊಂದಿಗೆ ಕೇಂದ್ರ ಸರ್ಕಾರ ನಡೆಸಿದ ಸುದೀರ್ಘ ಮಾತುಕತೆಗಳ ಬಗ್ಗೆ ನ್ಯಾಯಪೀಠಕ್ಕೆ ಅಟಾರ್ನಿ ಜನರಲ್ ಕೆಕೆ ವೇಣುಗೋಪಾಲ್ ಮಾಹಿತಿ ನೀಡಿದರು. ಮಧ್ಯಂತರ ತಡೆ ನೀಡಲು ತರಾತುರಿಯೇಕೆ ಎಂಬ ವೇಣುಗೋಪಾಲ್ ವಾದ ನ್ಯಾಯಪೀಠದ ಅತೃಪ್ತಿಗೆ ಕಾರಣವಾಯಿತು. 'ನಾವೇಕೆ ಕಾನೂನಿಗೆ ತಡೆ ನೀಡಬಾರದು? ತಾಳ್ಮೆಯ ಬಗ್ಗೆ ನೀವು ನಮಗೆ ಪ್ರವಚನ ನೀಡುವುದು ಬೇಡ' ಎಂದು ಸಿಜೆಐ ಬೊಬ್ಡೆ ಚಾಟಿ ಬೀಸಿದರು.



ಕೃಷಿ ಸುಧಾರಣಾ ಕಾನೂನುಗಳನ್ನು ಜಾರಿ ಮಾಡುವ ಮುನ್ನ ಸಂಬಂಧಪಟ್ಟವರೊಂದಿಗೆ ಅಗತ್ಯ ಸಮಾಲೋಚನೆಗಳನ್ನು ಮಾಡುತ್ತಿದ್ದರೆ ಈ ಪರಿಯಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದವೇ?

| ಎಸ್.ಎ. ಬೊಬ್ಡೆ ಮುಖ್ಯ ನ್ಯಾಯಮೂರ್ತಿ

ಈ ಕಾನೂನುಗಳು ರೈತರ ಪರವಾಗಿವೆ ಮತ್ತು ಅವರಿಗೆ ಅನುಕೂಲಗಳನ್ನುಂಟು ಮಾಡಲಿವೆ. ಕಾನೂನು ಲೋಪಗಳಿಂದ ಕೂಡಿದೆ ಎಂದರೆ ದಕ್ಷಿಣ ಭಾರತದ ರೈತರು ಏಕೆ ವಿರೋಧಿಸುತ್ತಿಲ್ಲ? ಶಾಸಕಾಂಗದ ವ್ಯಾಪ್ತಿಗೆ ಹೊರತಾಗದೆ ಅಥವಾ ಮೂಲಭೂತ ಹಕ್ಕುಗಳ ದಮನವಾಗಿಲ್ಲ ಎಂದಾದರೆ ಕಾನೂನುಗಳನ್ನು ತಡೆಯಲಾಗದು

| ಕೆಕೆ ವೇಣುಗೋಪಾಲ್ ಕೇಂದ್ರದ ಅಟಾರ್ನಿ ಜನರಲ್